## ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

ಸಿ.ಸಿ. ನಂ.2172/2025

| | | |
|---|---|---|
| ಸಾಕ್ಷಿದಾರರ ಹೆಸರು | ಶ್ರೀ. ಶ್ರೀಧರ | ಸಿ.ಡಬ್ಲ್ಯು-3 |
| ತಂದೆಯ ಹೆಸರು | ನಾರಾಯಣಪ್ಪ ಕೆ. | ಪಿ .ಡಬ್ಲ್ಯೂ-1 |
| ವಯಸ್ಸು | 47 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ಮುಖ್ಯ ಪೇದೆ, ಸಾಗರ ಗ್ರಾಮಾಂತರ ಪೊಲೀಸ್ ಠಾಣೆ | ದಿನಾಂಕಃ |
| ವಾಸಃ | ಸಾಗರ | 16.06.2026 |

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

**1.** ನಾನು ಸಾಗರ ಪೇಟೆ ಪೊಲೀಸ್ ಠಾಣೆಯಲ್ಲಿ 2013 ರಿಂದ 18.06.2021 ರವರೆಗೆ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

**2.** ದಿನಾಂಕ 10.01.2025 ರಂದು ನನ್ನನ್ನು ಠಾಣಾ ಎಸ್ ಹೆಚ್ ಒ ಕರ್ತವ್ಯಕ್ಕೆ ನೇಮಕ ಮಾಡಲಾಗಿತ್ತು. ಅದರಂತೆ ನಾನು ಕರ್ತವ್ಯದ ಮೇಲೆ ಇದ್ದಾಗ ಸಂಜೆ 07.30 ಗಂಟೆಗೆ ಚಾ.ಸಾ 5 ರವರು 4 ಜನ ಅಸಾಮಿಗಳನ್ನು ಮತ್ತು ಒಂದು ಲಗೇಜ್ ಕ್ಯಾರಿಯರ್ ವಾಹನದ ನೊಂದಣಿ ಸಂಖ್ಯೆ ಕೆಎ-15/ಎ-7224 ಅನ್ನು ಹಾಜರು ಪಡಿಸಿದರು. ನಂತರ ಆ ವಾಹನದಲ್ಲಿ ಅಸಾಮಿಗಳು ದನಗಳನ್ನು ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿರುವುದಾಗಿ ಅನುಮಾನ ಇದೆ ಎಂದು ತಿಳಿಸಿದರು. ಸದರಿ ವಿಷಯವನ್ನು ನಾನು ಚಾ.ಸಾ 1 ರವರಿಗೆ ದೂರವಾಣಿ ಮೂಕ ತಿಳಿಸಿದೆ. ನಂತರ ಸಂಜೆ 07.45 ರ ಸುಮಾರಿಗೆ ನ್ಯಾಯಾಲಯದ ಮುಂದಿರುವ ಆರೋಪಿತನು ಠಾಣೆಗೆ ಹಾಜರಾಗಿ ಚಾ.ಸಾ 5 ರವರು ಕರೆದುಕೊಂಡು ಬಂದಿರುವ 4 ಜನ ವ್ಯಕ್ತಿಗಳನ್ನು ಏಕೆ ಕರೆದುಕೊಂಡು ಬಂದರು ಎಂದು ಕೇಳಿದರು. ಆಗ ನಾನು ಅಕ್ರಮವಾಗಿ ದನಗಳನ್ನು ಸಾಗಾಣಿಕೆ ಮಾಡುತ್ತಿರುವ ಅನುಮಾನದ ಮೇರೆಗೆ ಅವರನ್ನು ವಿಚಾರಣೆಗೆ ಕರೆದುಕೊಂಡು ಬಂದಿದ್ದೆವು ಎಂದು ಆರೋಪಿತನಿಗೆ ತಿಳಿಸಿ, ಚಾ.ಸಾ 1 ರವರು ಬಂದ ನಂತರ ಮಾತನಾಡಿ ಎಂದು ಹೇಳಿದೆ.

**3.** ರಾತ್ರಿ 08.00 ಗಂಟೆಗೆ ಚಾ.ಸಾ 1 ರವರು ಠಾಣೆಯಲ್ಲಿದ್ದಾಗ ನನ್ನನ್ನು ಕರೆದು ದನ ಸಾಗಾಣಿಕೆಯ ವಿಚಾರವಾಗಿ ಸಾಕಷ್ಟು ಸಾರ್ವಜನಿಕರು ಠಾಣೆಯ ಮುಂದೆ ಹಾಜರಿದ್ದಾರೆ, ಅವರ ಪೈಕಿ ಶಶಾಂಕ್, ಸುನೀಲ್ ಮತ್ತು ಅಕ್ಷಯ್ ಹಾಗೂ ಇತರರನ್ನು ಕರೆಯುವಂತೆ ಸೂಚಿಸಿದರು. ಆ ವೇಳೆಗೆ ಆರೋಪಿತನು ಚಾ.ಸಾ 1 ರವರ ಕೊಠಡಿಗೆ ಹೋಗುತ್ತಿದ್ದಂತೆ, ಚಾ.ಸಾ 1 ರವರು ಆರೋಪಿತನನ್ನು 1 ನಿಮಿಷದ ನಂತರ ಕರೆಯುತ್ತೇನೆ ಎಂದು ತಿಳಿಸಿದರು. ಚಾ.ಸಾ 2 ಹಾಗೂ ಇತರರೊಂದಿಗೆ ಚಾ.ಸಾ 1 ರವರು ತಮ್ಮ ಕೊಠಡಿಯಲ್ಲಿ ಮಾತನಾಡುತ್ತಿದ್ದಾಗ, ಚಾ.ಸಾ 1 ರವರು ಪುನಃ ನನ್ನನ್ನು ಕರೆದು ರವಿ ಕುಗ್ವೆ ಅಂದರೆ ಆರೋಪಿತನನ್ನು ಕರೆಯುವಂತೆ ನನಗೆ ಸೂಚಿಸಿದರು. ಆಗ ಆರೋಪಿತನನ್ನು ರಾತ್ರಿ 08.15 ರ ಸುಮಾರಿಗೆ ಚಾ.ಸಾ 1 ರವರ ಕೊಠಡಿಗೆ ಕಳುಹಿಸಿದೆ. ಒಳಗೆ ಹೋಗುತ್ತಿದ್ದಂತೆ ಆರೋಪಿತನು ಚಾ.ಸಾ 1 ರವರನ್ನು ಕುರಿತು ಡಕಾಯಿತಿ ಮಾಡುವವರನ್ನು ಬಿಟ್ಟು, ಕೇವಲ ದನ ಸಾಗಾಣಿಕೆ ಮಾಡಲು ಪ್ರಯತ್ನಿಸಿದವರನ್ನು ಕರೆದುಕೊಂಡು ಬಂದು ಠಾಣೆಯಲ್ಲಿ ಕೂರಿಸಿದ್ದೀರಾ, ಅವರನ್ನು ಹಿಡಿಯಲು ನಿಮಗೆ ಏನು ಅಧಿಕಾರ ಇದೆ ಎಂದರು, ಏರು ಧ್ವನಿಯಲ್ಲಿ ಕೂಗಾಡಿ, ಅವಾಚ್ಯವಾಗಿ ಬೈಯ್ದು, ಸರ್ಕಾರಿ ಕರ್ತವ್ಯಕ್ಕೆ ಅಡ್ಡಿ ಪಡಿಸಿದರು. ಚಾ.ಸಾ 1 ರವರು ಚಾ.ಸಾ 5 ರವರು ಹಾಜರು ಪಡಿಸಿದ 4 ಜನರನ್ನು ದನ ಸಾಗಾಣಿಕೆ ವಿಚಾರವಾಗಿ ಶಾಂತಿ ಭಂಗವಾಗಬಾರದು ಎಂದು ವಿಚಾರಣೆಗೆ ಕರೆಯಿಸಿರುವುದಾಗಿ ಹೇಳಿದರೂ ಸಹ ಆರೋಪಿತನು ಚಾ.ಸಾ 1 ರವರೊಂದಿಗೆ ಕೂಗಾಡಿ, ಗಲಾಟೆ ಮಾಡಿದನು. ನಾನು ಮತ್ತು ನಮ್ಮ ಸಿಬ್ಬಂದಿ ಸೇರಿ ಆರೋಪಿತನನ್ನು ಠಾಣೆಯಿಂದ ಹೊರಗೆ ಕಳುಹಿಸಿದೆವು. ಆದರೆ ಆರೋಪಿತನು ಠಾಣೆಯ ಮುಂದೆ ತನ್ನ ಅಂಗಿಯನ್ನು ಕಳಚಿ, ಅರೆ ನಗ್ನವಾಗಿ ಕುಳಿತು, ಚಾ.ಸಾ 1 ರವರನ್ನು ಬೈಯ್ಯುತ್ತಿದ್ದನು. ನಂತರ ಈ ವಿಚಾರವಾಗಿ ಚಾ.ಸಾ 1 ರವರು ಸಾಗರ ಟೌನ್ ಪೋಲಿಸ್ ಠಾಣೆಗೆ ದೂರನ್ನು ನೀಡಿದರು. ನಂತರ ತನಿಖಾಧಿಕಾರಿಗಳು ಘಟನೆಯ ಕುರಿತು ದಿನಾಂಕ 11.01.2025 ರಂದು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದರು. ಆ ದಿನ ಠಾಣೆಯಲ್ಲಿ ಗಲಾಟೆ ಮಾಡಿ, ಕರ್ತವ್ಯಕ್ಕೆ ಅಡ್ಡಿ ಪಡಿಸಿದ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದಿರುವ ವ್ಯಕ್ತಿಯಾಗಿದ್ದಾನೆ.

**ಪಾಟೀ ಸವಾಲುಃ ಆರೋಪಿತನ ಪರ ವಕೀಲರಾದ ಶ್ರೀ. ಎಸ್.ಎನ್.ಎಂ ರವರಿಂದಃ–**

**1.** ಆ ದಿನ ಚಾ.ಸಾ 5 ರವರು ಅನುಮಾನದ ಮೇರೆಗೆ ಕರೆದುಕೊಂಡು ಬಂದಿದ್ದ 4 ಜನರ ಹೆಸರು ಎಂದರೆ, ಹುಣುಸೂರಿನ ವಾಸಿ ಅನೀಲ್, ತಾಳಗುಪ್ಪದ ನಾಗರಾಜ್, ಕುರುವಂತೆಯ ಪ್ರವೀಣ್ ಮತ್ತು ಹುಣುಸೂರಿನ ಮಂಜಪ್ಪ. ಸದರಿ ವ್ಯಕ್ತಿಗಳ ವಿರುದ್ಧ ಹಿಂದೆ ದನ ಸಾಗಾಣಿಕೆ ಸಂಬಂಧ ಪ್ರಕರಣ ದಾಖಲಾಗಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಮೇಲೆ ಹೇಳಿದ ಹೆಸರುಗಳನ್ನು ನನ್ನ ಹೇಳಿಕೆಯಲ್ಲಿ

ಬರೆಯಿಸಿಲ್ಲ ಮತ್ತು ಚಾ.ಸಾ 1 ರವರು ನೀಡಿದ ದೂರಿನಲ್ಲಿಯೂ ಸಹ ಅವರ ಹೆಸರು ಉಲ್ಲೇಖ ಮಾಡಿಲ್ಲ ಎಂದರೆ ಸರಿ. ಸದರಿ ವ್ಯಕ್ತಿಗಳ ಮೇಲೆ ಚಾ.ಸಾ 5 ರವರಿಗೆ ಏಕೆ ಅನುಮಾನ ಬಂತು ಎಂದು ನನಗೆ ಗೊತ್ತಿಲ್ಲ. ಚಾ.ಸಾ 5 ರವರು ಹಾಜರು ಪಡಿಸಿದ ಗೂಡ್ಸ್ ವಾಹನದಲ್ಲಿ ದನ, ಹೋರಿ ಅಥವಾ ದನದ ಕರು ಇರಲಿಲ್ಲ. ಸಾರ್ವಜನಿಕರ ದೂರಿನ ಮೇರೆಗೆ ಮೇಲ್ಕಂಡ ವ್ಯಕ್ತಿಗಳ ವಿರುದ್ಧ ನಾವು ಪ್ರಕರಣವನ್ನು ದಾಖಲು ಮಾಡಿದ್ದೇವೆ. ಆ ದೂರನ್ನು ದಾಖಲಿಸುವ ಸಂದರ್ಭದಲ್ಲಿ ಮೇಲ್ನೋಟಕ್ಕೆ ನನಗೆ ಯಾವುದೇ ಸಾಕ್ಷ್ಯಾಧಾರಗಳು ಕಂಡು ಬಂದಿರಲಿಲ್ಲ. ಆದರೆ ಶಶಾಂಕ್ ಎನ್ನುವವರು ಸದರಿ 4 ಜನರ ವಿರುದ್ಧ ದೂರನ್ನು ನೀಡಿದ್ದರಿಂದ ನಾನು ಪ್ರಕರಣ ದಾಖಲು ಮಾಡಿದ್ದೇನೆ. ಶಶಾಂಕ್ ಹಾಗೂ ಅವನ ಸಂಗಡಿಗರು ನಮ್ಮ ಇಲಾಖೆಯ ಖಾಯಂ ಬಾತ್ಮೀದಾರರು ಎನ್ನುವುದು ಸರಿಯಲ್ಲ. ಶಶಾಂಕ್ ರವರು ಆ ದಿನ ಚಾ.ಸಾ 5 ರವರು ಹಾಜರು ಪಡಿಸಿದ ವ್ಯಕ್ತಿಗಳ ವಿರುದ್ಧ ಸುಳ್ಳು ದೂರು ನೀಡುವ ಸಾಧ್ಯತೆ ಇದೆ ಎಂದರೆ ಸರಿಯಲ್ಲ.

**2.** ದಿನಾಂಕ 10.01.2025 ರಂದು ಆರೋಪಿತನು ಗ್ರಾಮಾಂತರ ಪೋಲೀಸ್ ಠಾಣೆಯ ಮುಂದೆ ಸುಮಾರು ಒಂದುವರೆ ಗಂಟೆಯವರೆಗೆ ಕಾಯುತ್ತಾ ಕುಳಿತಿದ್ದನು ಎಂದರೆ ಸರಿಯಲ್ಲ. ಆರೋಪಿತನು ಈ ಹಿಂದೆ ಜಿಲ್ಲಾ ಪಂಚಾಯತಿಯ ಸದಸ್ಯನಾಗಿದ್ದ ಎಂದರೆ ಸರಿ. ಆರೋಪಿತನು ಸಮಾಜ ಸೇವೆಯನ್ನು ಸಹ ಮಾಡುತ್ತಾ ಬಂದಿದ್ದಾನೆ ಎಂದರೆ ಸರಿ. ಆರೋಪಿತನು, ತಿ-ನ ಶ್ರೀನಿವಾಸ, ಬೆಳಲಮಕ್ಕಿ ಕೆರಿಯಪ್ಪ ಮತ್ತು ಕನ್ನಪ್ಪ ಹಾಗೂ ಮುಂತಾದ ಸಮಾಜ ಸೇವಕರು ಆ ದಿನ ಪೋಲೀಸ್ ಠಾಣೆಗೆ ನಾವು ಅಮಾಯಕರನ್ನು ಕರೆದುಕೊಂಡು ಬಂದು ಕೂರಿಸಿಕೊಳ್ಳುವ ವಿಚಾರವಾಗಿ ಪ್ರಶ್ನಿಸಲು ಬಂದಿದ್ದರು ಎಂದರೆ ಸರಿಯಲ್ಲ. ಮುಂದುವರೆದು ಆರೋಪಿತನು ಸೇರಿ 2-3 ಜನರು ಆ ದಿನ ಠಾಣೆಗೆ ಬಂದಿದ್ದರು ಎನ್ನುತ್ತಾರೆ. ಆರೋಪಿತನು ಸಾಮಾಜಿಕ ಕಳಕಳಿಯಿಂದ ಠಾಣೆಗೆ ಬಂದಿದ್ದರೂ ಸಹ ನಾನು ಮತ್ತು ನಮ್ಮ ಸಿಬ್ಬಂದಿ ಹಾಗೂ ಚಾ.ಸಾ 1 ರವರು ಆರೋಪಿತನಿಗೆ ಹಲ್ಲೆ ಮಾಡಿ, ಅವರ ಅಂಗಿ ಹರಿದು ಹಾಕಿದೆವು ಎನ್ನುವುದು ಸರಿಯಲ್ಲ.

**3.** ಆ ದಿನ ಆರೋಪಿತನನ್ನು ನಮ್ಮ ಅಧಿಕಾರಿಗಳು ವೈದ್ಯಕೀಯ ತಪಾಸಣೆಗೆ ಒಳಪಡಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವೈದ್ಯಾಧಿಕಾರಿಗಳು ಆರೋಪಿತನ ಸ್ಥಿತಿಯನ್ನು ನೋಡಿ ಒಳರೋಗಿಯಾಗಿ ದಾಖಲು ಮಾಡಿಕೊಂಡು ಚಿಕಿತ್ಸೆ ನೀಡುವ ಅಗತ್ಯವಿದೆ ಎಂದು ತಿಳಿಸಿದರೂ ಸಹ ನಾವೆಲ್ಲರೂ ನಮ್ಮ ಪ್ರಭಾವ ಬೀರಿ ವೈದ್ಯರಿಗೆ ಮನವಿ ಮಾಡಿಕೊಂಡು ಆರೋಪಿತನನ್ನು ಒಳರೋಗಿಯಾಗಿ ದಾಖಲು ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತನು ದೂರನ್ನು ನೀಡಿದ ಕುರಿತು ನನಗೆ ಗೊತ್ತಿಲ್ಲ. ಏಕೆಂದರೆ ಆರೋಪಿತನು ನಮ್ಮ ಠಾಣೆಯಲ್ಲಿ ಯಾವುದೇ ದೂರನ್ನು ನೀಡಿಲ್ಲ.

**4.** ಘಟನೆ ನಡೆಯಿತು ಎಂದು ಹೇಳುವ ದಿನದಂದು ರಾತ್ರಿ 09.00–10.00 ಗಂಟೆಯವರೆಗೆ ಚಾ.ಸಾ 1 ರವರು ದೂರನ್ನು ನೀಡಲು ಸಾಗರ ಟೌನ್ ಪೋಲಿಸ್ ಠಾಣೆಗೆ ಹೋಗಿದ್ದರು. ಆರೋಪಿತನು ಚಾ.ಸಾ 1 ರವರ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿ ಪಡಿಸಿದನು ಎಂದು, ಚಾ.ಸಾ 1 ರವರ ಬೋಧನೆ ಮೇರೆಗೆ ನಾನು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿತನು ಸರ್ಕಾರಿ ಸೇವೆ ಅಡ್ಡಿ ಪಡಿಸಿಲ್ಲ ಮತ್ತು ಠಾಣೆಯಲ್ಲಿ ಗಲಾಟೆ ಮಾಡಿ, ಚಾ.ಸಾ 1 ಮತ್ತು ಸಿಬ್ಬಂದಿಗೆ ಅವಾಚ್ಯವಾಗಿ ಬೈಯಿದ್ದಿಲ್ಲ ಎನ್ನುವುದು ಸರಿಯಲ್ಲ. ಪೋಲಿಸ್ ಅಕ್ರಮದ ವಿರುದ್ಧ ದಿನಾಂಕ 10.01.2025 ರಂದು ಸಾಕಷ್ಟು ಸಾರ್ವಜನಿಕ ಕಾರ್ಯಕರ್ತರು ಮತ್ತು ಸಮಾಜ ಸೇವಕರು ಪ್ರತಿಭಟನೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿತನ ವಿರುದ್ಧ ಒಂದು ಪ್ರಕರಣ ಇರಲಿ ಎಂದು ಯಾವುದೇ ಸಾಕ್ಷ್ಯಾಧಾರಗಳು ಇಲ್ಲದೆ ಈ ಪ್ರಕರಣ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.